ದಿನಾಂಕ: 17-೦೮-೨೬ ಕ್ರ.ಸಂ. ೨

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ತಿಪ್ಪಣ್ಣಪ್ಪ ಕಮಕನೂರು ಇವರು ನೀಡಿರುವ ಶೂನ್ಯ ವೇಳೆ ಪ್ರಶ್ನೆಯ ಮೇಲಿನ ಹೇಳಿಕೆ.

**ಪ್ರಶ್ನೆ: ರಾಜ್ಯದ 27 ಜಿಲ್ಲೆಗಳ ಅಂತರ್ಜಲದಲ್ಲಿ ಅತ್ಯಂತ ಅಪಾಯಕಾರಿ 'ನೈಟ್ರೇಟ್' ಸಾಂದ್ರತೆ ಹೆಚ್ಚಾಗಿರುವ ಹಾಗೂ ಕಲುಷಿತ ನೀರು ಕುಡಿದು ಸಾರ್ವಜನಿಕರ ಆರೋಗ್ಯ ಕ್ಷೀಣಿಸುತ್ತಿರುವ ಗಂಭೀರ ಪರಿಸ್ಥಿತಿಯ ಕುರಿತು.**

ಇತ್ತೀಚೆಗೆ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ನೀಡಿದ ಅಧಿಕೃತ ಮಾಹಿತಿ ಹಾಗೂ ಕೇಂದ್ರೀಯ ಅಂತರ್ಜಲ ಮಂಡಳಿಯ (CGWB) 2025-26 ನೇ ಸಾಲಿನ ವರದಿಯ ಪ್ರಕಾರ, ನಮ್ಮ ಕರ್ನಾಟಕ ರಾಜ್ಯದ 31 ಜಿಲ್ಲೆಗಳ ಪೈಕಿ ಬಿಸಿಯೇರಿದ 27 ಜಿಲ್ಲೆಗಳಲ್ಲಿ ಅಂತರ್ಜಲದಲ್ಲಿ ಅಪಾಯಕಾರಿ ಮಟ್ಟಕ್ಕಿಂತ ಹೆಚ್ಚಿನ ನೈಟ್ರೇಟ್ ಮತ್ತು ಫ್ಲೋರೈಡ್ ಅಂಶಗಳು ಪತ್ತೆಯಾಗಿರುವ ಅತ್ಯಂತ ಕಳವಳಕಾರಿ ಸಂಗತಿ ವಿಜಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಸಾರ್ವಜನಿಕ ಕುಡಿಯುವ ನೀರಿನಲ್ಲಿ ನೈಟ್ರೇಟ್ ಸಾಂದ್ರತೆಯು ಗರಿಷ್ಠ ಅಂತರಾಷ್ಟ್ರೀಯ ಮಿತಿಗಿಂತ ಕಡಿಮೆಯಿರಬೇಕು. ಆದರೆ ರಾಜ್ಯದಲ್ಲಿ ಪರೀಕ್ಷಿಸಲಾದ ಮಾದರಿಗಳ ಪೈಕಿ ಶೇ. 20 ಕ್ಕೂ ಹೆಚ್ಚು ಭಾಗಗಳಲ್ಲಿ ಈ ಮಿತಿ ಮೀರಿರುವುದು ಕಂಡು ಬಂದಿದೆ. ನೈಟ್ರೇಟ್ ಕಲುಷಿತ ನೀರನ್ನು ನಿರಂತರವಾಗಿ ಕುಡಿಯುವುದರಿಂದ ನವಜಾತ ಶಿಶುಗಳಲ್ಲಿ ಆಮ್ಲಜನಕದ ಕೊರತೆಯುಂಟಾಗಿ "ಬ್ಲೂ ಬೇಬಿ ಸಿಂಡ್ರೋಮ್" ಕಾಯಿಲೆ ಬರುತ್ತದೆ. ಗರ್ಭಿಣಿಯರಲ್ಲಿ ಗರ್ಭಪಾತ ಹಾಗೂ ಶಿಶು ವೈಕಲ್ಯತೆ ಹೆಚ್ಚಾಗುತ್ತದೆ. ವಯಸ್ಕರಲ್ಲಿ ಜಠರ ಮತ್ತು ಕರುಳಿನ ಕ್ಯಾನ್ಸರ್ ಹಾಗೂ ಥೈರಾಯ್ಡ್ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಕೃಷಿಯಲ್ಲಿ ಮಿತಿಮೀರಿ ಮತ್ತು ಅಸಮತೋಲಿತವಾಗಿ ಬಳಸಲಾಗುತ್ತಿರುವ ನೈಟ್ರೋಜನ್ ಯೂರಿಯಾ ಮತ್ತು ರಸಗೊಬ್ಬರಗಳು ಮಳೆಯ ನೀರಿನೊದಿಗೆ ಇಂಗಿ ಅಂತರ್ಜಲವನ್ನು ತೀವ್ರವಾಗಿ ಕಲುಷಿತಗೊಳಿಸುತ್ತಿವೆ.

ವಿಶೇಷವಾಗಿ: ನಮ್ಮ ಕಲ್ಯಾಣ ಕರ್ನಾಟಕ ಸೇರಿದಂತೆ ದಾವಣಗೆರೆ, ಬೀದರ್, ಕಲಬುರ್ಗಿ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಗ್ರಾಮೀಣ ಭಾಗಗಳಲ್ಲಿ ಶುದ್ಧ ಕುಡಿಯುವ ನೀರಿನ ಕೊರತೆಯಿಂದಾಗಿ ಜನರು ಈ ವಿಷಪೂರಿತ ಅಂತರ್ಜಲವನ್ನೇ ಕುಡಿಯುತ್ತಿದ್ದಾರೆ.

ಆದ್ದರಿಂದ ಸಾರ್ವಜನಕರ ಆರೋಗ್ಯ ಹಿತದೃಷ್ಟಿಯಿಂದ ರಾಜ್ಯದ ಎಲ್ಲಾ 27 ಪೀಡಿತ ಜಿಲ್ಲೆಗಳ ಜಲಮೂಲಗಳ ನೀರಿನ ಮಾದರಿ ತಪಾಸಣೆ ನಡೆಸಬೇಕು. ಅಪಾಯಕಾರಿ ನೈಟ್ರೇಟ್ ಹೊಂದಿರುವ ಕೊಳವೆಬಾವಿಗಳನ್ನು ತಕ್ಷಣ 'ಕುಡಿಯಲು ಅನರ್ಹ' ಎಂದು ಗುತುತಿಸಿ, ಆ ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಅಥವಾ RO ಘಟಕಗಳ ಮೂಲಕ ಶುದ್ಧ ನೀರು ಪೂರೈಸಬೇಕು. ಅತಿಯಾದ ನೈಟ್ರೋಜನ್/ಯೂರಿಯಾ ಬಳಕೆಯನ್ನು ತಡೆಯಲು ಕೃಷಿ ಇಲಾಖೆಯಿಂದ ಜಾಗೃತಿ ಅಭಿಯಾನ ನಡೆಸಿ, ಸಾಯಯವ ಹಾಗೂ ನೈಸರ್ಗಿಕ ಕೃಷಿಗೆ ಹೆಚ್ಚಿನ ಸಬ್ಸಿಡಿ ನೀಡಬೇಕು. ಕಲುಷಿತ ನೀರು ಪೀಡಿತ ಪ್ರದೇಶಗಳ ಸಾರ್ರವಜನಿಕರಿಗೆ ವಿಶೇಷ ಆರೋಗ್ಯ ಶಿಬಿರ ಆಯೋಜಿಸಿ ರೋಗ ಲಕ್ಷಣಗಳನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಚಿಕಿತ್ಸೆ ನೀಡಬೇಕೆಂದು ಶೂನ್ಯ ವೇಳೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಒತ್ತಾಯಿಸಿತ್ತೇನೆ.

**ಹೇಳಿಕೆ:** ಕೇಂದ್ರೀಯ ಅಂತರ್ಜಲ ಮಂಡಳಿಯಿಂದ ಅಂತರ್ಜಲ ಮಟ್ಟದ ಏರಿಳಿತವನ್ನು ದಾಖಲಿಸಲು ರಾಜ್ಯಾದ್ಯಂತ 1868 observations wells (971 ಕೊಳವೆಬಾವಿ,897 ತೆರೆದ ಬಾವಿ) ನ ನೀರಿನ ಮಾದರಿಗಳ ಪರೀಕ್ಷೆಗಳನ್ನು ಕೈಗೊಂಡಿದ್ದು, ಸದರಿ ಪರೀಕ್ಷಾ ವರದಿಗಳ ಆಧಾರದ ಮೇಲೆ ವರದಿಯನ್ನು ಪ್ರಕಟಿಸಲಾಗಿರುತ್ತದೆ.

ನೈಟ್ರೇಟ್ ಅಂಶವು ಆ ನೀರಿನ ಮೂಲಗಳ ಸುತ್ತಮುತ್ತಲಿನ ಮಲಿನತೆಯಿಂದ ಹಾಗೂ ಕಲುಷಿತ ನೀರು, ಮಳೆಯ ನೀರಿನೊಂದಿಗೆ ಸೇರಿ ಕಂಡು ಬಂದಿರುಕೃಷಿ/ ವ್ಯವಸಾಯದಲ್ಲಿ ಹೆಚ್ಚು ರಾಸಾಯನಿಕ ಗೊಬ್ಬರವನ್ನು ಬಳಸುವುದರಿಂದ, ಸದರಿ ರಾಸಾಯನಿಕ ಗೊಬ್ಬರಗಳು ಮಳೆಯ ನೀರು ಮತ್ತು ಇತರೆ ಕಲುಷಿತ ನೀರಿನೊಂದಿಗೆ ಸೇರಿ ಅಂತರ್ಜಲ ಸೇರುತ್ತದೆ. ನೈಟ್ರೇಟ್ ಕಲುಷಿತ ನೀರನ್ನು ನಿರಂತರವಾಗಿ ಕುಡಿಯುವುದರಿಂದ ನವಜಾತ ಶಿಶುಗಳಲ್ಲಿ ಆಮ್ಲಜನಕದ ಕೊರತೆಯುಂಟಾಗಿ "ಬ್ಲೂ ಬೇಬಿ ಸಿಂಡ್ರೋಮ್" ಕಾಯಿಲೆ ಬರುತ್ತದೆ. ಗರ್ಭಿಣಿಯರಲ್ಲಿ ಗರ್ಭಪಾತ ಹಾಗೂ ಶಿಶು ವೈಕಲ್ಯತೆ ಮತ್ತು ಇತರೆ ಸಮಸ್ಯೆಗಳು ಕಂಡು ಬರುತ್ತವೆ.

ಫ್ಲೋರೈಡ್ ಅಂಶವು ಜಲಮೂಲಗಳಲ್ಲಿ ನೈಸರ್ಗಿಕವಾಗಿದ್ದು, ಮುಖ್ಯವಾಗಿ ಕರ್ನಾಟಕದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಹೆಚ್ಚಾಗಿ ಫ್ಲೋರೈಡ್ ಅಂಶವು ಕಂಡು ಬಂದಿರುತ್ತದೆ. ಈ ಜಿಲ್ಲೆಗಳಲ್ಲಿ ಕುಡಿಯಲು ಮತ್ತು ವ್ಯವಸಾಯಕ್ಕಾಗಿ ಅಂತರ್ಜಲದ ಮೇಲೆ ಹೆಚ್ಚು ಅವಲಂಬಿತವಾಗಿರುವುದರಿಂದ ಅಂತರ್ಜಲ ಮಟ್ಟ ಕುಸಿತಕ್ಕೆ ಕಾರಣವಾಗಿದ್ದು ಸದರಿ ಅಂತರ್ಜಲ ಮಟ್ಟದಲ್ಲಿ ಫ್ಲೋರೈಡ್ ಅಂಶವು ನಿಗಧಿತ ಮಟ್ಟಕ್ಕಿಂತ ಹೆಚ್ಚಾಗಿರುವುದಕ್ಕೆ ಕಾರಣವಾಗಿರುತ್ತದೆ.

ಪ್ರಸ್ತುತ ರಾಜ್ಯದಲ್ಲಿ ಇಲಾಖೆಯಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ, ಚಿಕ್ಕೋಡಿ ತಾಲ್ಲೂಕು ಕೇಂದ್ರವು ಒಳಗೊಂಡಂತೆ 32 ಜಿಲ್ಲಾ ಮಟ್ಟದ ಮತ್ತು 47 ತಾಲ್ಲೂಕು ಮಟ್ಟದ ಪ್ರಯೋಗಾಲಯಗಳನ್ನು ಸೇರಿ ಒಟ್ಟು 79 ರಾಸಾಯನಿಕ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಇದಲ್ಲದೆ ಈಗಾಗಲೇ ಸೂಕ್ಷ್ಮಜೀವಾಣು ನಿಯತಾಂಕಗಳ ಪರೀಕ್ಷೆಗಳನ್ನು ಕೈಗೊಳ್ಳಲು 18 ಜಿಲ್ಲಾ ಕೇಂದ್ರಗಳಲ್ಲಿ ಸೂಕ್ಷ್ಮಜೀವಾಣು ಪರೀಕ್ಷಾ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ.

ಪ್ರಾಥಮಿಕ ಹಂತದಲ್ಲಿ ಗ್ರಾಮ/ಗ್ರಾಮ ಪಂಚಾಯತಿ ಮಟ್ಟದಲ್ಲಿ ನೀರಿನ ಗುಣಮಟ್ಟದ ಸಂಭವನೀಯ ಪರೀಕ್ಷೆಗಳನ್ನು (Presumptive Test) Field test kits ಮೂಲಕ ಕೈಗೊಳ್ಳಲಾಗುತ್ತದೆ, ಸದರಿ ಪರೀಕ್ಷೆಯಲ್ಲಿ ಕಲುಷಿತವೆಂದು ಕಂಡು ಬಂದ ನೀರಿನ ಮಾದರಿಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿ ಕಲುಷಿತವೆಂದು ಕಂಡುಬಂದಲ್ಲಿ ಪರ್ಯಾಯ ಕ್ರಮಗಳನ್ನು ಕೈಗಳ್ಳಲಾಗಿರುತ್ತದೆ. ಪ್ರಯೋಗಾಲಯಗಳಲ್ಲಿ ಪರೀಕ್ಷಿಸುವ ನೀರಿನ ಮಾದರಿಗಳಲ್ಲಿ ಕಲುಷಿತ ಅಂಶಗಳು ಕಂಡುಬಂದರೆ, ಮರುಪರೀಕ್ಷೆಗೆ ಒಳಪಡಿಸಿ, ಮರುಪರೀಕ್ಷೆಯಲ್ಲಿಯೂ ಸಹ ಕುಡಿಯಲು ಯೋಗ್ಯವಲ್ಲವೆಂದು ದೃಢಪಟ್ಟಿರುವ ಪ್ರದೇಶಗಳಲ್ಲಿ ಪರ್ಯಾಯ ಸುರಕ್ಷಿತ ಕುಡಿಯುವ ನೀರಿನ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಅಲ್ಲದೆ, ಗ್ರಾಮಗಳಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ನೀರನ್ನು ಬಳಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಪ್ರಯೋಗಾಲಯಗಳಲ್ಲಿ 2025-26ನೇ ಸಾಲಿನಲ್ಲಿ ಒಟ್ಟು 2,41,471 ನೀರಿನ ಮಾದರಿಗಳ ಪರೀಕ್ಷೆ ನಡೆಸಲಾಗಿದೆ. ಇದರಲ್ಲಿ 1,122 ಗ್ರಾಮಗಳ ನೀರಿನ ಮಾದರಿಗಳಲ್ಲಿ ಫ್ಲೋರೈಡ್ ಅಂಶ ಹಾಗೂ 1,900 ನೀರಿನ ಮಾದರಿಗಳಲ್ಲಿ ನೈಟ್ರೇಟ್ ಅಂಶ ನಿಗದಿತ ಮಿತಿಗಿಂತ ಹೆಚ್ಚಿರುವುದು ಕಂಡುಬಂದಿದೆ. ಇಂತಹ

ಮಾದರಿಗಳನ್ನು ಜಿಲ್ಲಾ ಪ್ರಯೋಗಾಲಯಗಳಲ್ಲಿ ಮರುಪರೀಕ್ಷೆಗೆ ಒಳಪಡಿಸಿ, ಕುಡಿಯಲು ಯೋಗ್ಯವಲ್ಲವೆಂದು ದೃಢಪಟ್ಟಿರುವ ಪ್ರದೇಶಗಳಲ್ಲಿ ಪರ್ಯಾಯ ಸುರಕ್ಷಿತ ಕುಡಿಯುವ ನೀರಿನ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಅಲ್ಲದೆ, ಗ್ರಾಮಗಳಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ನೀರನ್ನು ಬಳಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಇದರೊಂದಿಗೆ ರಾಜ್ಯದ ಎಲ್ಲಾ 31 ಜಿಲ್ಲೆಗಳ ವ್ಯಾಪ್ತಿಯ 2,6333 ಗ್ರಾಮಗಳಲ್ಲಿ ಕುಡಿಯುವ ನೀರಿನ ಎಲ್ಲಾ ಮೂಲಗಳು, ಶಾಲೆಗಳು, ಅಂಗನವಾಡಿಗಳು, ನೀರಿನ ಶೇಖರಣಾ ಘಟಕಗಳು ಹಾಗೂ ಕಾರ್ಯಾತ್ಮಕ ನಳನೀರು ಸಂಪರ್ಕಗಳಿಂದ ಒಟ್ಟು 8,01,512 ನೀರಿನ ಮಾದರಿಗಳ ಪರೀಕ್ಷೆ ನಡೆಸಲಾಗಿದೆ.

ನೈಟ್ರೇಟ್ ಮತ್ತು ಫ್ಲೋರೈಡ್ ಅಂಶವು ನಿಗದಿತ ಮಟ್ಟಕ್ಕಿಂತ ಹೆಚ್ಚಾಗಿ ಕಂಡುಬಂದಿರುವಂತಹ ಗ್ರಾಮಗಳಲ್ಲಿ ಪರ್ಯಾಯವಾಗಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ರಾಜ್ಯದಲ್ಲಿ ಒಟ್ಟು 18,000 ಕ್ಕೂ ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿರುತ್ತದೆ. ಇದರಲ್ಲಿ 16339 ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ ಘಟಕಗಳನ್ನು ಪುನಃಶ್ಚೇತನಗೊಳಿಸಲು ಕ್ರಮವಹಿಸಲಾಗುತ್ತಿದೆ.

ಒಟ್ಟಾರೆಯಾಗಿ ರಾಜ್ಯದ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿರುವ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಮೇಲ್ಮೈನೀರು ಲಭ್ಯವಿರುವ ಕಡೆಗಳಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಅಂತರ್ಜಲದ ಬಳಕೆಯನ್ನು ಕನಿಷ್ಠಗೊಳಿಸುವತ್ತ ರಾಜ್ಯ ಸರ್ಕಾರವು ಕಾರ್ಯನಿರತವಾಗಿರುತ್ತದೆ.

**(ಈಶ್ವರ ಬಿ. ಖಂಡ್ರೆ)**
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ